DW-2: ಶ್ರೀನಿವಾಸ

ದಿನಾಂಕಃ **27.02.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 3, 5 ಮತ್ತು 7 ನೇ ಪ್ರತಿವಾದಿಗಳ ಪರವಾಗಿ ಶ್ರೀ ಪಿ.ವಿ.ವೈ. ವಕೀಲರಿಂದಃ**

1. ನನ್ನ ಪ್ರಮಾಣಪತ್ರದಲ್ಲಿ ನಾನು ನಮ್ಮ ತಂದೆಗೆ ಕೇವಲ ಇಬ್ಬರೂ ಮಕ್ಕಳು ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರ ಖಂಡಿಕೆ 10 ರಲ್ಲಿ ನನ್ನ ಸಹೋದರಿಯರ ಬಗ್ಗೆ ಬರೆಸಿಲ್ಲ ಎಂದರೆ ಸರಿಯಲ್ಲ. ಸುಬ್ಬಯ್ಯ ಮತ್ತು ಅವರ ಪತ್ನಿ ಹನುಮಕ್ಕ ನನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಎಂದರೆ ಸರಿ. ಹನುಮಕ್ಕ ಮತ್ತು ಸುಬ್ಬಯ್ಯ ಇಬ್ಬರೂ ಸಹಾ ದಿನಾಂಕಃ 09.06.2010 ರಂದು ತಮ್ಮ ಭಾಗದ ಸ್ವತ್ತುಗಳನ್ನು ರಾಮಾಂಜಿನಮ್ಮ ರವರ ಹೆಸರಿಗೆ ಊಯಿಲು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅವರಿಬ್ಬರೂ ಜೀವಂತ ಇದ್ದಾಗ ರಾಮಾಂಜಿನಮ್ಮ ಮತ್ತು ಅವರ ಗಂಡ 13 ನೇ ಪ್ರತಿವಾದಿ ಮಾತ್ರ ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದು ಆ ಕಾರಣ ಆಕೆಯ ಹೆಸರಿಗೆ ಅವರಿಬ್ಬರೂ ಊಯಿಲು ಬರೆದಿರುತ್ತಾರೆ ಎಂದರೆ ಸರಿಯಲ್ಲ.

2. ಸ.ನಂ. 192, 193, 194 ಮತ್ತು 196 ರಲ್ಲಿ ಒಟ್ಟು 16 ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ಊಯಿಲನ್ನು ಬರೆದಿದ್ದು ಅದರಂತೆ ರಾಮಾಂಜಿನಮ್ಮ ರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. 2024-25 ರ ಪಹಣಿಗಳು ಸಹಾ ರಾಮಾಂಜಿನಮ್ಮ ರವರ ಹೆಸರಿಗೆ ಇವೆ ಎಂದರೆ ಸಾಕ್ಷಿಯು ದಾಖಲೆಗಳನ್ನು ಸೃಷ್ಠಿ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ನನ್ನ ತಂದೆ ರವರ 1 ನೇ ಪತ್ನಿಯ ಮನೆಗೆ ಮನೆಯ ಅಳಿಯನಾಗಿ ಹೋಗಿದ್ದರು ಎಂದರೆ ಸರಿಯಲ್ಲ. ಗುರ್ರಪ್ಪ ರವರು ತಮ್ಮ ಸ್ವತ್ತುಗಳನ್ನು ದಿನಾಂಕಃ 20.03.1970 ರಂದು ವಿಭಾಗ ಮಾಡಿದ್ದು ಸದರಿ ವಿಭಾಗ ಪತ್ರದಲ್ಲಿ ನನ್ನ ತಂದೆ ವೆಂಕಟಪ್ಪ ರವರನ್ನು ಮನೆಯ ಅಳಿಯನಾಗಿ 1 ನೇ ಪತ್ನಿಯ ಮನೆಗೆ

ಕಳುಹಿಸಿದ್ದು ಆ ಬಗ್ಗೆ ಸ್ಪಷ್ಟವಾಗಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಅವರನ್ನು ಮನೆಯ ಅಳಿಯನನ್ನಾಗಿ ಕಳುಹಿಸಿರುವ ಕಾರಣ ಗುರ್ರಪ್ಪ ಮತ್ತು ಅಕ್ಕಲಪ್ಪ ರವರ ಸ್ವತ್ತುಗಳಲ್ಲಿ ಅವರಿಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

3. ಅದೇ ರೀತಿ ಸದರಿ ವಿಭಾಗ ಪತ್ರದಲ್ಲಿ ಗುರ್ರಪ್ಪ ರವರ 3 ನೇ ಮಗ ನಾರಾಯಣಪ್ಪ ರವರನ್ನು ಅಕ್ಕಲಪ್ಪ ಮತ್ತು ಗಂಗಮ್ಮ ರವರಿಗೆ ದತ್ತು ನೀಡಿರುವ ಕಾರಣ ಅಕ್ಕಲಪ್ಪ ರವರ ಅರ್ಧ ಭಾಗದ ಹಿಸ್ಸೆಗೆ ಅವರು ಹಕ್ಕುದಾರರಾಗಿರುತ್ತಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಅಕ್ಕಲಪ್ಪ ರವರು ನಾರಾಣಯಪ್ಪ ರವರನ್ನು ದತ್ತು ಸ್ವೀಕಾರ ಮಾಡಿರುವ ಕಾರಣ ಅವರ ಎಲ್ಲಾ ಆಸ್ತಿಗಳಿಗೂ ಅವರೇ ಹಕ್ಕುದಾರರು ಎಂದರೆ ಸರಿಯಲ್ಲ. ಗಂಗಮ್ಮ ರವರು ಆಕ್ಟೋಬರ್ 1976 ರಲ್ಲಿ ನಿಪಿ. 11 ರಂತೆ ನಾರಾಯಣಪ್ಪ ರವರ ಹೆಸರಿಗೆ ಒಂದು ನೋಂದಾಯಿತ ಊಯಿಲನ್ನು ಬರೆದಿದ್ದು ಅದರಂತೆ ನಾರಾಣಯಪ್ಪ ರವರೇ ಆಕೆಯ ಸ್ವತ್ತುಗಳಿಗೆ ಹಕ್ಕುದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಊಯಿಲಿನಂತೆ ಗಂಗಮ್ಮ ರವರ ಹೆಸರಿನಲ್ಲಿ ಇದ್ದ ಸ್ವತ್ತುಗಳು ನಾರಾಣಯಪ್ಪ ರವರ ಹೆಸರಿಗೆ ಎಂ.ಆರ್. 6/1990-91 ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ.

4. ಎಂ.ಆರ್. 6/1990-91 ರಂತೆ ಸ.ನಂ. 40/2 ರಲ್ಲಿ 3 ಎಕರೆ 15 ಗುಂಟೆ, ಸ.ನಂ. 139 ರಲ್ಲಿ 7 ಎಕರೆ 12 ಗುಂಟೆ ಪೈಕಿ ಅರ್ಧ ಹಿಸ್ಸೆ, ಸ.ನಂ. 47 ರಲ್ಲಿ 39 ಎಕರೆ 18 ಗುಂಟೆ ಪೈಕಿ ಅರ್ಧ ಹಿಸ್ಸೆ, ಸ.ನಂ. 51 ರಲ್ಲಿ 36 ಎಕರೆ ಪೈಕಿ ¼ ಹಿಸ್ಸೆ, ಸ.ನಂ. 55 ರಲ್ಲಿ 34 ಎಕರೆ 17 ಗುಂಟೆ ಪೈಕಿ ¼ ಹಿಸ್ಸೆ, ಸ.ನಂ. 57 ರಲ್ಲಿ 37 ಎಕರೆ 20 ಗುಂಟೆ ಪೈಕಿ ಅರ್ಧ ಹಿಸ್ಸೆ, ಸ.ನಂ. 410/2 ರಲ್ಲಿ 3 ಎಕರೆ 13 ಗುಂಟೆ ಮತ್ತು ಸ.ನಂ. 139 ರಲ್ಲಿ 7 ಎಕರೆ 12 ಗುಂಟೆ ಪೈಕಿ ಅರ್ಧ ಹಿಸ್ಸೆಗೆ ನಾರಾಣಯಪ್ಪ ರವರ ಹೆಸರಿಗೆ ಖಾತೆ ವರ್ಗಾವಣೆಯಾಗಿ ಅವರ ಹಕ್ಕು ಮತ್ತು ಸ್ವಾಧೀನದಲ್ಲಿ ಸ್ವತ್ತುಗಳು ಇರುತ್ತವೆ ಎಂದರೆ ಸರಿಯಲ್ಲ. ಅದರಂತೆ ದಿನಾಂಕಃ 17.02.2014 ರಂದು ನಾರಾಯಣಪ್ಪ ರವರು ತಮ್ಮ ಮಗ 5 ನೇ ಪ್ರತಿವಾದಿ ಅಶ್ವತ್ಥಪ್ಪ ರವರ ಹೆಸರಿಗೆ ಸ.ನಂ. 51/1 ರಲ್ಲಿ 9 ಎಕರೆ 13 ಗುಂಟೆ, ಸ.ನಂ. 57/4 ರಲ್ಲಿ 8 ಎಕರೆ ಮತ್ತು ಸ.ನಂ. 40/2 ರಲ್ಲಿ 3 ಎಕರೆ 13

ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಾಯಿತ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾನಪತ್ರದಂತೆ 5ನೇ ಪ್ರತಿವಾದಿಯ ಹೆಸರಿಗೆ ಸದರಿ ಸ್ವತ್ತುಗಳ ಖಾತೆ ವರ್ಗಾವಣೆಯಾಗಿದ್ದು ಅವರೇ ಮಾಲೀಕರು ಮತ್ತು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ನಾರಾಯಣಪ್ಪ ರವರು ಸ.ನಂ. 57 ರ ಉಳಿಕೆ ಸ್ವತ್ತನ್ನು ತಮ್ಮ ಹೆಣ್ಣುಮಕ್ಕಳಿಗೆ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ರೀತಿಯ ಹಕ್ಕು ಮತ್ತು ಹಿತಾಸಕ್ತಿ ಇಲ್ಲದೇ ಇದ್ದರೂ ಅನಾವಶ್ಯಕವಾಗಿ ಸೇರ್ಪಡೆಗೊಂಡಿದ್ದೇವೆ ಎಂದರೆ ಸರಿಯಲ್ಲ.

(3, 5 ಮತ್ತು 7ನೇ ಪ್ರತಿವಾದಿಗಳ ಪರ ವಕೀಲರು ಮಧ್ಯಾಹ್ನ ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಮುಂದುವರಿದ ಪಾಟೀ ಸವಾಲಿಗೆ ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.

**DW-2:** ಶ್ರೀನಿವಾಸ

ದಿನಾಂಕಃ **27.02.2025** ರಂದು ಸಾಕ್ಷಿಯನ್ನು ಮಧ್ಯಾಹ್ನ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 3, 5 ಮತ್ತು 7 ನೇ ಪ್ರತಿವಾದಿಗಳ ಪರವಾಗಿ ಶ್ರೀ ಪಿ.ವಿ.ವೈ. ವಕೀಲರಿಂದಃ**

ರ್ಯಾಪ್ಟೆ (Ryapte) ಗ್ರಾಮದ ಸ.ನಂ. 51/3 ರ 14 ಎಕರೆ 27 ಗುಂಟೆ ಆಸ್ತಿ ಪ್ರಸ್ತುತ ಭೀಮಪ್ಪ ರವರ ಮೊಮ್ಮಕ್ಕಳ ಹೆಸರಿನಲ್ಲಿದೆ. ಈಗ ನನಗೆ ತೋರಿಸಿದ ಸ.ನಂ. 51/3 ರ ಆಸ್ತಿ ವೆಂಕಟಪ್ಪ ಬಿನ್ ಗುರ್ರಪ್ಪ ರವರ ಹೆಸರಿನಲ್ಲಿದೆ. ಸದರಿ ಪಹಣಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಡಿ. 55 ಎಂದು ಗುರುತಿಸಲಾಯಿತು. ಸದರಿ ಸ್ವತ್ತಿಗೆ ವೆಂಕಟಪ್ಪ ರವರ ಮಕ್ಕಳ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಭೀಮಪ್ಪ ರವರ ಮೊಮ್ಮಕ್ಕಳ ಹೆಸರಿನಲ್ಲಿ ಪಹಣಿ ಇರುವ ಬಗ್ಗೆ ನಮ್ಮ ಚಿಕ್ಕಪ್ಪ ರವರ ಮಗ ಈಶ್ವರಪ್ಪ ರವರ ಕಡೆಯಿಂದ ತಕರಾರು ಸಲ್ಲಿಸಿದ್ದೇವೆ. ನಾನು ಸದರಿ ಖಾತೆಯ ಬಗ್ಗೆ ತಕರಾರನ್ನು ಸಲ್ಲಿಸಿರುವುದಿಲ್ಲ. ಈ ಬಗ್ಗೆ ನಾನು ಎ.ಸಿ. ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು ದಾಖಲೆಯನ್ನು ಹಾಜರುಪಡಿಸಿದ್ದೇನೆ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.